

ಹಾಕುತ್ತಿದ್ದ ವಿಷ್ಣು ಸಹಸ್ರನಾಮದ ರೆಕಾರ್ಡ್ ತಮ್ಮ ಮನೆಯವರೆಗೂ ಕೇಳುತಿತ್ತು. ಈ ಹೆಸರು ನನ್ನನ್ನು ಅತೀವವಾಗಿ ಸೆಳೆದಿತ್ತು. ಹೇಮಾಂಗ ಚಿನ್ನದಂಥ ಮೈಯವನು. ಆ ಕಲ್ಪನೆಯೇ ಎಷ್ಟು ಸುಂದರ!

ಸಣ್ಣ ಕಿವಿಯೋಲೆ, ಮೂಗುತಿ, ತಾಳಿ ಹೊರತು ಯಾವ ಚಿನ್ನದ ಅದೃಷ್ಟವನ್ನೂ ನಾನು ಕಂಡಿರಲಿಲ್ಲ. ಹೇಮಾಂಗನಿಗಾದರೂ ಆ ಅದೃಷ್ಟವಿರಲಿ ಎಂದು ಎಷ್ಟು ಮನದಲ್ಲೇ ಕೋರಿಕೆಯಿಟ್ಟದ್ದು ಆ ಭಗವಂತನಲ್ಲಿ! ಅವರಿದ್ದಾಗ ಇಲ್ಲದ ಭಾಗ್ಯ ಈಗ ಅವರಿಲ್ಲದಾಗ ಡೆತ್ ಬೆನಿಫಿಟ್ಸ್ ಎನ್ನುವ ಹೆಸರಲ್ಲಿ ಒಂದಷ್ಟು ಲಕ್ಷಗಳು ಅಕೌಂಟ್‌ಗೆ ಸೇರಿದ್ದವು. ಚಿನ್ನದ ಸರ, ಒಂದು ಜೊತೆ ಬಳೆ, ಕಿವಿಯೋಲೆ, ಉಂಗುರ, ಮೈಸೂರ್ ಸಿಲ್ಕ್, ಕಾಂಜೀವರಂ ಸೀರೆಗಳು ಧಾರಾಳವಾಗಿ ಬರುತ್ತದೆ. ಯಾಕೋ ಆ ದಿಸೆಯಲ್ಲಿ ಯೋಚನೆಯಿಲ್ಲ. ಸಂಜೆ ಹೇಮು ಕರೆ ಮಾಡಿದ್ದ.

‘ಆಫೀಸಿಗೆ ಹೋಗಿದ್ಯಾ? ಏನು ಹೇಳಿದ್ರು? ನಾನು ಬರಬೇಕಾದರೆ ಹೇಳು ಒಂದು ದಿನ ರಜೆ ಹಾಕಿ ಬಂದು ನಿನ್ನ ಕೆಲಸ ಮುಗಿಸಿಕೊಡ್ತೀನಿ.’

‘ಸದ್ಯಕ್ಕೆ ಅದರ ಅವಶ್ಯಕತೆ ಇಲ್ಲ. ಐ ಕ್ಯಾನ್ ಮ್ಯಾನೇಜ್’ ಎಂದೆ.

‘ಯು ಆರ್ ವೆರಿ ಸ್ಮಾರ್ಟ್ ಬಿಡಮ್ಮ, ಎಲ್ಲಿ ಹೋದರೂ ಕೆಲಸ ಮುಗಿಸ್ಕೊಂಡು ಬರ್ತೀ. ಡಿಗ್ರೀ ಈಸ್ ಜಸ್ಟ್ ಎ ಸರ್ಟಿಫಿಕೇಟ್’ ಎಂದಾಗ ನಿಟ್ಟುಸಿರಿಟ್ಟೆ.

ರಾತ್ರಿ ಊಟದ ಶಾಸ್ತ್ರ ಮುಗಿಸಿ, ಆಫೀಸಿನಿಂದ ತಂದಿದ್ದ ಫಾರಂ ಭರ್ತಿ ಮಾಡುವ ಅನ್ನಿಸಿತು. ಮೊದಲು ಅದಕ್ಕೆ ಸಂಬಂಧಿತ ಪ್ರಮಾಣಪತ್ರಗಳನ್ನು ತೆಗೆದಿಟ್ಟುಕೊಳ್ಳಬೇಕು, ಪೆನ್ನು ತೆರೆದ ನಂತರ ಮಧ್ಯೆ ಮಧ್ಯೆ ಏಳುವಂತಾಗಬಾರದು ಎಂದು ಅಟ್ಟದಲ್ಲಿದ್ದ ಹಳೆಯ ಕಿಟ್ ಬ್ಯಾಗ್‌ನಿಂದ ಹಸಿರು ಕವಚವಿದ್ದ ಫೋಲ್ಡರ್ ತೆಗೆದಿರಿಸಿಕೊಂಡೆ. ಅದರಲ್ಲಿದ್ದ ಪ್ರಾಥಮಿಕ, ಮಾಧ್ಯಮಿಕ ಪ್ರೌಢಶಾಲೆಯ ಮಾರ್ಕ್ಸ್ ಕಾರ್ಡ್‌ಗಳತ್ತ ಒಮ್ಮೆ ನೋಟ ಹರಿಸಿದೆ. ಎರಡೋ ಮೂರೋ ಕಾಣಲಿಲ್ಲ. ಆರರ ತನಕ ಸಾಧಾರಣ ಅಂಕಗಳು. ಏಳು ಪಬ್ಲಿಕ್ ಪರೀಕ್ಷೆ ಅದೆಲ್ಲಿಂದ ಬಂದಿತ್ತೋ ಆ ಹಟ ಕ್ಲಾಸಿನಲ್ಲಿ ನಗಣ್ಯಳಾಗಿದ್ದವಳು ಮೊದಲ ಹತ್ತು ಮಂದಿಯಲ್ಲಿ ಗುರುತಿಸಿಕೊಂಡಿದ್ದೆ. ಹೈಸ್ಕೂಲಿನಲ್ಲಿ ಮತ್ತೆ ಹಿಂದೆ.

ವಯಸ್ಸಿಗೆ ಬಂದಾಗಿತ್ತು. ಮನೆಯಲ್ಲಿ ಫಸ್ಟ್ ಕ್ಲಾಸು ಅನ್ನುವ ವಾತಾವರಣದ ಪ್ರಶ್ನೆಯೇ ಇರಲಿಲ್ಲ. ಒಂದೆರಡು ಅಟೆಂಪ್ಟ್‌ಗಳಲ್ಲಿ ಹೈಸ್ಕೂಲು ಮುಗಿಸಿ ಕೆಲಸದಲ್ಲಿ ತೊಡಗಿಕೊಂಡವರು. ನಾನು ಹತ್ತನೇ ಕ್ಲಾಸಿನಲ್ಲಿ ಮೊದಲ ದರ್ಜೆಯಲ್ಲಿ ಪಾಸಾಗಿದ್ದೆ. ಅದರ ಯಶಸ್ಸು ಸಂಪೂರ್ಣವಾಗಿ ನಮ್ಮ ಶಾಲೆಗೆ ಹೊಸದಾಗಿ ಸೇರಿದ್ದ ವಿಸ್ಮಯಿಗೆ ಸಲ್ಲಬೇಕು. ನನ್ನ ಪಕ್ಕದಲ್ಲೇ ಕುಳಿತುಕೊಳ್ಳುತ್ತಿದ್ದಳು. ಟೆಸ್ಟಿನಲ್ಲಿ ಅವಳು ಮೊದಲಿಗಳಾಗಿ ನನಗೆ ಅತಿ ಕಡಿಮೆ ಅಂಕಗಳು ಸಿಕ್ಕಾಗ ನಾಚಿಕೆಯಾಗುತ್ತಿತ್ತು. ಆಗ ಧೈರ್ಯ ತುಂಬಿದ್ದು ಅವಳೇ. ನಮ್ಮ ಮನೆಯಿಂದ ಐದು ನಿಮಿಷದ ನಡಿಗೆ ಅವರ ಮನೆಗೆ. ಶಾಲೆಗೆ ಹೋಗುವಾಗ ಅವರ ಮನೆ ಮುಂದು ಹಾದು ಹೋಗಬೇಕು.

‘ಪಾವನಿ, ಶಾಲೆಗೆ ಒಟ್ಟಿಗೆ ಹೋಗೋಣ, ನಿನಗೋಸ್ಕರ ಕಾಯ್ತೀನಿ’ ಎಂದಿದ್ದಳು. ಅಂದಿನಿಂದ ಶುರುವಾಗಿದ್ದು ನನ್ನ ಬದುಕಿನಲ್ಲಿ ಬದಲಾವಣೆ. ಶಾಲೆಗೆ ಹೋಗುವಾಗ ಬರುವಾಗ ಶಾಲೆಯ ಪಠ್ಯಗಳ ಬಗ್ಗೆ ಚರ್ಚಿಸುತ್ತಿದ್ದಳು. ಅಂಕಗಳಿಗಾಗಿ ಬಹುತೇಕ ಗೆಳತಿಯರು ಟ್ಯುಟೋರಿಯಲ್ ಮೊರೆ ಹೋದರೆ ನನಗೆ ಆಶ್ರಯ ಕೊಟ್ಟಿದ್ದು ಇದೇ ವಿಸ್ಮಯ. ಸಂಜೆ ಆರರಿಂದ ಏಳರವರೆಗೆ ಅವರ ಮನೆಯಲ್ಲಿ ದಿನನಿತ್ಯದ ಹೋಂ ವರ್ಕ್‌ಗೆ ಸಹಾಯ ಮಾಡುತ್ತಿದ್ದಳು. ಮುಖ್ಯ ಪರೀಕ್ಷೆಯ ಸಿದ್ಧತೆಯಲ್ಲಿ ದಿನಕ್ಕೆ ನಾಲ್ಕೈದು ಗಂಟೆಗಳ ಕಾಲ ಅವರ ಮನೆಯಲ್ಲೇ ಊಟ ಪಾಠ! ಮರೆಯಲಾದೀತೆ?

‘ಅಪ್ಪನಿಗೆ ವರ್ಗವಾಗಿದೆಯಲ್ಲ? ಈ ವರ್ಷ ಮುಗಿಸಿ ಕಾಲೇಜಿಗೆ ಅಲ್ಲಿಗೇ ಹೋಗುವುದು ಅಂತ ತೀರ್ಮಾನ, ಅದಕ್ಕೇ ಅಜ್ಜಿ ಮನೆಯಲ್ಲಿ ಇರೋದು’ ಎನ್ನುತ್ತ ಎಷ್ಟು ಚೆನ್ನಾಗಿ ರಾಜಿಯಾಗಿದ್ದಳು. ನನ್ನೆಣಿಕೆ ಮೀರಿ ಅಂಕಗಳನ್ನು ಗಳಿಸಿದ್ದೆ. ನನ್ನ ಅಕ್ಕ ಅಣ್ಣಂದಿರು ಯಾರೂ ಕಾಲೇಜಿನ ಮೆಟ್ಟಿಲು ಹತ್ತಿರಲಿಲ್ಲ. ಒಂದೂವರೆ ಕಿಲೋಮೀಟರು ದೂರದಲ್ಲಿದ್ದ ಕಾಲೇಜಿಗೆ ಸೇರಿದ್ದೆ. ನನ್ನ ಹಿಂದೆ ಇಬ್ಬರು ತಂಗಿಯರು. ಅವರಿಗೆ ನಾನು ಸ್ಫೂರ್ತಿಯಾಗಬೇಕೆಂಬ ಕನಸು. ಆದರೆ ಅದು ನನಸಾಗಲೇ ಇಲ್ಲ.

ಎರಡನೇ ಪಿಯುಸಿಯ ಅರ್ಧ ವಾರ್ಷಿಕ ಪರೀಕ್ಷೆಗೂ ಮುನ್ನ ಅಪ್ಪ ತೀರಿಕೊಂಡರು. ‘ಈ ವರ್ಷದೊಳಗೆ ಕನ್ಯಾದಾನ ಮಾಡಿ ಮುಗಿಸಿ’ ಎಂದು ಯಾರೋ ಪುಕ್ಕಟೆ ಸಲಹೆ ಕೊಟ್ಟರು. ಬಲಿಪಶು ನಾನು. ‘ಹನ್ನೆರಡು ವರ್ಷಗಳ ಅಂತರ ಅದೆಲ್ಲ ದೊಡ್ಡ ವಿಷಯವಲ್ಲ’ ಎಂದು ಮತ್ಯಾರೋ ತಲೆ ತುಂಬಿದರು. ಹುಡುಗನ ಕಡೆಯಿಂದ ಯಾವ ಅಪೇಕ್ಷೆಯು ಇಲ್ಲ ಎಂದು ಕನ್ವಿನ್ಸ್ ಮಾಡಿ ನನ್ನನ್ನು ದಬ್ಬಿದ್ದರು. ಯಾವ ಸಡಗರವೂ ಇಲ್ಲ. ಇನ್ಯಾವ ಪದ ಬಳಸುವುದು? ಒಂದು ನಿಶ್ಚಿತಾರ್ಥವೇ... ದೇವರ ಸಮಾರಾಧನೆ, ವರಪೂಜೆ ಕೊನೆಗೆ ಸಾಂಗವಾಗಿ ಧಾರೆ? ಉಹುಂ, ಹಾರ ಬದಲಾಯಿಸಿ ತಾಳಿ ಬಿಗಿದಿದ್ದು ಅಷ್ಟೇ! ಇನ್ನೆರಡೇ ತಿಂಗಳಿಗೆ ಮುಖ್ಯಪರೀಕ್ಷೆ. ಅಳುವೇ ಬಂದಿತ್ತು. ಪರೀಕ್ಷೆಗೆ ಹೋಗಬಹುದು ಎಂದು ಮೊದಲೇ ಮಾತಾಗಿದ್ದರಿಂದ ಆ ಅವಧಿಯಲ್ಲಿ ಅಮ್ಮನ ಮನೆಯಲ್ಲಿದ್ದೆ. ಕೊರಳಲ್ಲಿ ಕರಿಮಣಿ, ಕಾಲುಂಗುರ... ಲಂಗ ಜಂಪರ್ ಧರಿಸಿ ಪರೀಕ್ಷೆಗೆ ಹೋಗುವಾಗ ಯಾರನ್ನೂ ಮಾತನಾಡಿಸಲು ಧೈರ್ಯವಿಲ್ಲ, ಒಂದು ತರಹ ಕೀಳರಿಮೆ. ಗೆಳತಿಯರ ಅಯ್ಯೋ ಪಾಪದ ದೃಷ್ಟಿ ಎದುರಿಸಲು ತಯಾರಿರಲಿಲ್ಲ. ಮೊದಲ ದರ್ಜೆಯಲ್ಲಿ ಪಾಸಾಗಬಹುದಿತ್ತು, ಆದರೆ ಎರಡನೆಯದಕ್ಕೆ ಬಂದು ನಿಂತಿತ್ತು. ಆ ಅಂಕಪಟ್ಟಿಯ ಮೇಲೆ ಕೈಯಾಡಿಸಿದೆ. ಅದಕ್ಕೆ ಜೊತೆಯಾಗಿ ಟಿ.ಸಿ. ಇತ್ತು. ಅದರಲ್ಲಿನ ಹುಟ್ಟಿದ ದಿನಾಂಕದ ಕಾಲಂ ನೋಡಿದೆ. ಎಂಟು ತಿಂಗಳು ಮೊದಲೇ ಹುಟ್ಟಿದಂತೆ ತೋರಿಸಿದೆ.

‘ಮನೆಯಲ್ಲಿ ಸುಧಾರಿಸುವ ಬದಲು ಸ್ಕೂಲಿಗೆ ಹಾಕೋಣ ಅಂದರೆ ವಯಸ್ಸು ಕಮ್ಮಿ ಅಂತಾರೆ, ಅದಕ್ಕೆ ಒಂಚೂರು ಜಾಸ್ತಿ ಕೊಟ್ವಿ’ ಅಮ್ಮ ಯಾರ ಬಳಿಯೋ ಹೇಳುತ್ತಿದ್ದದ್ದು ನೆನಪಿಗೆ ಬಂದು ಎದೆತುಂಬಿ ಬಂದಿತು. ಆ ಲೆಕ್ಕಕ್ಕೂ ಹದಿನೆಂಟರ ಮೊದಲೇ ಹಸೆಮಣೆಯೇರಿದ್ದೆ. ಮದುವೆಯಾದ ಮೇಲೆ ಒಂದೇ ಬಾರಿ ಮುಟ್ಟಾಗಿದ್ದು, ಹೇಮಾಂಗನ ಅಂಕುರವಾಗಿತ್ತು. ಮಿಥುನವೆಂಬುದು ಕಥೆ ಕಾದಂಬರಿಗಳಲ್ಲಿ ಓದಿದಷ್ಟು ರೋಮಾಂಚಕಾರಿಯಾಗಿರಲಿಲ್ಲ. ಅಸಹಾಯಕತೆಯ